**ಕರ್ನಾಟಕ ಸರ್ಕಾರ**

ಸಂ:ಹಿಂವಕನಿ/ಸಿಬ್ಬಂದಿ-3/ಸಿಆರ್-41/2018-19

ಆಯುಕ್ತರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ನಂ.16.ಡಿ ದೇವರಾಜ ಅರಸು ಭವನ, 3ನೇ ಮಹಡಿ,
ಮಿಲ್ಲರ್ಸ್ ಟ್ಯಾಂಕ್‌ಬಂಡ್ ಏರಿಯಾ, ವಸಂತನಗರ,
ಬೆಂಗಳೂರು:-560 052, ದಿನಾಂಕ:01.01.2019.
28

## ಅಧಿಕೃತ ಜ್ಞಾಪನ

**ವಿಷಯ:** ದಿನಾಂಕ:1-1-2019 ಕ್ಕೆ ಅನ್ವಯಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ **ಮಹಿಳಾ ಕಲ್ಯಾಣ ಕೇಂದ್ರ ಸಂಚಾಲಕಿಯರ ತಾತ್ಕಾಲಿಕ ಪದಕ್ರಮ** ಪಟ್ಟಿಯನ್ನು ಪ್ರಕಟಿಸುವ ಕುರಿತು.

********

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮ 1957 ರ ನಿಯಮ 10 ರನ್ವಯ ಪ್ರತಿ ವರ್ಷ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ. ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧಿಸೂಚನೆಗಳನ್ವಯ ಹೈದರಾಬಾದ್-ಕರ್ನಾಟಕ ನಿಯಮಗಳಂತೆ ಪ್ರತ್ಯೇಕ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಜೇಷ್ಠತಾ ಪಟ್ಟಿಗಳನ್ನು ಬೇರ್ಪಡಿಸಿ, ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ, ಉಳಿಕೆ ಮೂಲ ವೃಂದದ ಜೇಷ್ಠತಾ ಪಟ್ಟಿ ಹಾಗೂ ಹೈದರಾಬಾದ್-ಕರ್ನಾಟಕ ಕರ್ನಾಟಕ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಿ ನಿರ್ವಹಿಸಬೇಕಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಕಲ್ಯಾಣ ಕೇಂದ್ರ ಸಂಚಾಲಕಿಯರ ತಾತ್ಕಾಲಿಕ ಪದಕ್ರಮ ಪಟ್ಟಿ ಪ್ರಕಟಿಸಬೇಕಾಗಿದೆ. ದಿನಾಂಕ: 01.01.2019 ಕ್ಕೆ ಇದ್ದಂತೆ ಕಾರ್ಯನಿರ್ವಹಿಸುತ್ತಿರುವ ನೌಕರರ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಅನುಬಂಧ-1, ಉಳಿಕೆ ಮೂಲ ವೃಂದದ ಜೇಷ್ಠತಾ ಪಟ್ಟಿಯನ್ನು ಅನುಬಂಧ-2 ಹಾಗೂ ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಯನ್ನು ಅನುಬಂಧ-3 ರಲ್ಲಿ ತಯಾರಿಸಿ, ಈ ಅಧಿಕೃತ ಜ್ಞಾಪನದೊಂದಿಗೆ ಲಗತ್ತಿಸಿ ಹೊರಡಿಸಲಾಗಿದೆ.

ಸದರಿ ಪದಕ್ರಮ ಪಟ್ಟಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಕಲ್ಯಾಣ ಕೇಂದ್ರ ಸಂಚಾಲಕಿಯರಿಗೆ ತಾತ್ಕಾಲಿಕ ಪದಕ್ರಮ ಪಟ್ಟಿಯನ್ನು ಪರಿಚಲಿಸಿ ( ಅನ್ಯ ಕರ್ತವ್ಯದ ಮೇಲೆ ಇತರೆ ಕಛೇರಿ / ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವವರನ್ನು ಒಳಗೊಂಡು), ಸ್ವೀಕೃತಿಯನ್ನು ಪಡೆದು ಈ ಕಛೇರಿಗೆ ತಪ್ಪದೇ ಕಳುಹಿಸಲು ಸೂಚಿಸಿದೆ.

ಯಾವುದೇ ನೌಕರರು ಈ ಪದಕ್ರಮ ಪಟ್ಟಿಗೆ ಆಕ್ಷೇಪಣೆ ಮಾಡುವುದಿದ್ದಲ್ಲಿ, ಅವರು ಈ ಪದಕ್ರಮ ಪಟ್ಟಿಯನ್ನು ಪಡೆದ 15 ದಿನದೊಳಗಾಗಿ ತಮ್ಮ ಮೇಲಧಿಕಾರಿಗಳ ಮೂಲಕ ಈ ಕಛೇರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ಸಂಬಂಧಿಸಿದ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳು/ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ನೌಕರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ತಮ್ಮ ಕಛೇರಿಯಲ್ಲಿ ಲಭ್ಯವಿರುವ ಸೇವಾ ಪುಸ್ತಕ ಹಾಗೂ ವೈಯಕ್ತಿಕ ಕಡತ, ಇನ್ನಿತರೆ ದಾಖಲೆಗಳೊಂದಿಗೆ ಪರಿಶೀಲಿಸಿ, ಆಕ್ಷೇಪಣೆಗಳು ಸಮಂಜಸವಾಗಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಸೂಕ್ತ ಶಿಫಾರಸ್ಸಿನೊಂದಿಗೆ ಸಂಬಂಧಿಸಿದ ನೌಕರರಿಂದ ನಿಗದಿತ ಅವಧಿಯಲ್ಲಿ ಪಡೆದು ಸಲ್ಲಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಈ ಕಛೇರಿಗೆ ಸಲ್ಲಿಸುವುದು. ನಿಗದಿತ ಅವಧಿ ಮೀರಿ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

PV
(ಪಿ.ವಸಂತಕುಮಾರ್, ಭಾ.ಆ.ಸೇ.,)
**ಆಯುಕ್ತರು**
**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**
**ಬೆಂಗಳೂರು.**

**<u>ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.</u>**

1. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು.
2. ಸಂಬಂಧಿಸಿದ ನೌಕರರಿಗೆ ಮೇಲಾಧಿಕಾರಿಗಳ ಮುಖಾಂತರ
3. ಅ.ಜ್ಞಾ.ಕಡತ/ಕಛೇರಿ ಪ್ರತಿ ಹೆಚ್ಚುವರಿ ಪ್ರತಿ

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**ದಿನಾಂಕ:01.01.2019 ಕ್ಕೆ ಇದ್ದಂತೆ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಮಟ್ಟದ ವೃಂದದ ಮಹಿಳಾ ಕಲ್ಯಾಣ ಕೇಂದ್ರ ಸಂಚಾಲಕಿ ಇವರ ತಾತ್ಕಾಲಿಕ ಪದಕ್ರಮ ಪಟ್ಟಿ**

**ಅನುಬಂಧ-1**

| ಕ್ರ.ಸಂ | ನೌಕರರ ಹೆಸರು | ಕೆ.ಜಿ.ಐ.ಡಿ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೇಮಕಾತಿ ವಿಧಾನ | ಮೀಸಲಾತಿ ವರ್ಗ | ಸ್ವಂತ ತಾಲ್ಲೂಕು | ಸ್ವಂತ ಜಿಲ್ಲೆ |
|---|---|---|---|---|---|---|---|---|---|
| **1** | 2 | **3** | 4 | **6** | **7** | **8** | **9** | 10 | 11 |
| 1 | ಸರಳಾ ಬಾಯಿ | 3000102 | ಚಿತ್ತಾಪುರ | 07-06-1959 | 04-09-1981 | ನೇರ ನೇಮಕಾತಿ | ಎಸ್.ಸಿ | ಚಿತ್ತಾಪುರ | ಗುಲ್ಬರ್ಗಾ |
| 2 | ಪೌಲೀನ್ ಹೆಲೆನ್ | 1923427 | ಚಾಮರಾಜನಗರ | 31-05-1960 | 15-02-1993 | ನೇರ ನೇಮಕಾತಿ | ಯು.ಆರ್ | ಕೊಳ್ಳೇಗಾಲ | ಚಾಮರಾಜನಗರ |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**ದಿನಾಂಕ:01.01.2019 ಕ್ಕೆ ಇದ್ದಂತೆ ಕಾರ್ಯನಿರ್ವಹಿಸುತ್ತಿರುವ ಉಳಿಕೆ ಮೂಲ ವೃಂದದಲ್ಲಿನ ಮಹಿಳಾ ಕಲ್ಯಾಣ ಕೇಂದ್ರ ಸಂಚಾಲಕಿ ಇವರ ತಾತ್ಕಾಲಿಕ ಪದಕ್ರಮ ಪಟ್ಟಿ**

**ಅನುಬಂಧ-2**

| ಕ್ರ ಸಂ | ರಾಜ್ಯ ಪಟ್ಟಿಯ ಜೇ. ಕ್ರ ಸಂ | ನೌಕರರ ಹೆಸರು | ಕೆ.ಜಿ.ಐ.ಡಿ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು | ಲಿಂಗ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೇಮಕಾತಿ ವಿಧಾನ | ಮೀಸಲಾತಿ ವರ್ಗ | ಸ್ವಂತ ತಾಲ್ಲೂಕು | ಸ್ವಂತ ಜಿಲ್ಲೆ |
|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 1 | 2 | ಪೌಲೀನ್ ಹೆಲೆನ್ | 1923427 | ಚಾಮರಾಜನಗರ | ಮಹಿಳೆ | 31–05–1960 | 15–02–1993 | ನೇರ ನೇಮಕಾತಿ | ಯು.ಆರ್ | ಕೊಳ್ಳೆಗಾಲ | ಚಾಮರಾಜನಗರ |

ಆಯುಕ್ತರು

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಬೆಂಗಳೂರು

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**ದಿನಾಂಕ:01.01.2019 ಕ್ಕೆ ಇದ್ದಂತೆ ಕಾರ್ಯನಿರ್ವಹಿಸುತ್ತಿರುವ ಹೈದರಾಬಾದ್-ಕರ್ನಾಟಕ ಸ್ಥಳೀಯ ನೌಕರರ (371ಜೆ ಪ್ರಕಾರ ಅಭಿಮತ ಅಂಗೀಕರಿಸಿದ) ಮಹಿಳಾ ಕಲ್ಯಾಣ ಕೇಂದ್ರ ಸಂಚಾಲಕಿ ಇವರ ತಾತ್ಕಾಲಿಕ ಪದಕ್ರಮ ಪಟ್ಟಿ**

**ಅನುಬಂಧ-3**

| ಕ್ರ ಸಂ | ರಾಜ್ಯ ಪಟ್ಟಿಯ ಜೇ. ಕ್ರ ಸಂ | ನೌಕರರ ಹೆಸರು | ಕೆ.ಜಿ.ಐ.ಡಿ ಸಂಖ್ಯೆ | ಕಾರ್ಯನಿರ್ವಹಿಸು ತ್ತಿರುವ ತಾಲ್ಲೂಕು | ಲಿಂಗ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೇಮಕಾತಿ ವಿಧಾನ | ಮೀಸಲಾತಿ ವರ್ಗ | ಸ್ವಂತ ತಾಲ್ಲೂಕು | ಸ್ವಂತ ಜಿಲ್ಲೆ |
|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 1 | 1 | ಸರಳಾ ಬಾಯಿ | 3000102 | ಚಿತ್ತಾಪುರ | ಮಹಿಳೆ | 07-06-1959 | 04-09-1981 | ನೇರ ನೇಮಕಾತಿ | ಎಸ್.ಸಿ | ಚಿತ್ತಾಪುರ | ಗುಲ್ಬರ್ಗಾ |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು